ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ,
ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು -560023
ದೂರವಾಣಿ:080-23295510 ಇ-ಮೇಲ್:spmbeckar@gmail.com

ಸಂ:ಡಿಹೆಚ್ಎಸ್/ಬಿಇಸಿ/ಯುಜಿ/13/2022-23 ದಿನಾಂಕ: 12.12.2022

# ಅಧಿಸೂಚನೆ

**ವಿಷಯ:** 2022-23ನೇ ಸಾಲಿನಲ್ಲಿ ಎಂ.ಬಿ.ಬಿ.ಎಸ್. ಪೂರ್ಣಗೊಳಿಸಿ ವಿವಿಧ ಕಾರಣಗಳಿಂದ ಸ್ಥಳ ಬದಲಾವಣೆ ಕೋರಲಾದ ವೈದ್ಯರುಗಳಿಗೆ ಒಂದು ವರ್ಷ ಕಡ್ಡಾಯ ಸರ್ಕಾರಿ ಸೇವೆ ಸಲ್ಲಿಸಲು ಸ್ಥಳ ಮಾರ್ಪಾಡು ಮಾಡುವ ಬಗ್ಗೆ.

**ಉಲ್ಲೇಖ:**
1. ಆಯುಕ್ತಾಲಯದ ಆದೇಶ ಸಂಖ್ಯೆ: ಡಿಹೆಚ್ಎಸ್/ಬಿಇಸಿ/ಯುಜಿ/04 2022-23, ದಿನಾಂಕ: 02.09.2022, 21.09.2022 ಮತ್ತು 23.11.2022
2. ಸದರಿ ವೈದರ ಮನವಿ ಪತ್ರಗಳನ್ವಯ.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರಲ್ಲಿ ಒಂದು ವರ್ಷ ಕಡ್ಡಾಯ ಸರ್ಕಾರಿ ಸೇವೆ ಸಲ್ಲಿಸಲು ಎಂ.ಬಿ.ಬಿ.ಎಸ್ ವೈದ್ಯರುಗಳಿಗೆ ಈಗಾಗಲೇ ಸಮಾಲೋಚನೆಯ ಮುಖಾಂತರ ಸ್ಥಳ ನಿಯುಕ್ತಿಗೊಳಿಸಿ ಆದೇಶ ಹೊರಡಿಸಲಾಗಿತ್ತು.

ಆದರೆ ಉಲ್ಲೇಖ(2)ರಲ್ಲಿ ಸದರಿ ವೈದ್ಯರುಗಳು ಸ್ಥಳ ಬದಲಾವಣೆ ಕೋರಿ ಮನವಿಗಳನ್ನು ಸಲ್ಲಿಸಿರುತ್ತಾರೆ. ಸದರಿ ವೈದ್ಯರುಗಳನ್ನು ಮೆರಿಟ್ ಆಧಾರದ ಮೇಲೆ ಈ ಕೆಳಕಂಡ ಆದ್ಯತೆಯನುಸಾರ ಸಮಾಲೋಚನೆ ಮುಖಾಂತರ ಸ್ಥಳ ಮಾರ್ಪಾಡು ಮಾಡಲಾಗುವುದು. ಈ ಸಂಬಂಧ ಆದ್ಯತೆಯ ಮುಂದೆ ತೋರಿಸಿರುವ ದಾಖಲೆಗಳನ್ನು ಪಡೆದಿಟ್ಟುಕೊಂಡು ಸಮಾಲೋಚನೆಯ ದಿನಾಂಕದಂದು ಹಾಜರುಪಡಿಸುವುದು. ಕಡ್ಡಾಯವಾಗಿ ಆಧಾರ್ ಕಾರ್ಡನ್ನು ಜೊತೆಯಲ್ಲಿ ತರುವುದು.

| ಕ್ರ.ಸಂ. | ಆದ್ಯತೆ | ಸಲ್ಲಿಸಬೇಕಾದ ದಾಖಲೆಗಳು |
|---|---|---|
| 1 | ವೈದ್ಯಕೀಯ/ ಮಾರಣಾಂತಿಕ ಖಾಯಿಲೆ( ತಂದೆ/ ತಾಯಿ) | ಇತ್ತೀಚಿನ ವೈದ್ಯಕೀಯ ದಾಖಲಾತಿಗಳು. |
| 2 | ವಿಶೇಷ ಚೇತನರು | ಯುಡಿಐಡಿ ಕಾರ್ಡ್. |
| 3 | ಒಂಟಿ ಪೋಷಕರು | ಮರಣ ಪ್ರಮಾಣ ಪತ್ರ ಹಾಗೂ ಸಂಬಂಧ ಸೂಚಕ ದಾಖಲೆಗಳು. |
| 4 | ಪತಿ-ಪತ್ನಿ ಪ್ರಕರಣ | 1. ಇತ್ತೀಚೆಗೆ ಉದ್ಯೋಗದಾತರಿಂದ ಪಡೆದ ಸೇವಾ ಪ್ರಮಾಣ ಪತ್ರ.<br>2. ಕಡ್ಡಾಯ ಸೇವೆಯಡಿಯಲ್ಲಿನ ಅಭ್ಯರ್ಥಿಯಾಗಿದ್ದಲ್ಲಿ ಸ್ಥಳ ಬದಲಾವಣೆ ಕೋರುವವರು ಪತಿ/ಪತ್ನಿಯ ಕರ್ತವ್ಯ ನಿರತ ಸ್ಥಳದ ಹಂಚಿಕೆಯ ಪತ್ರ. |
| 5 | ಇತರೆ | ಸ್ಥಳ ಹಂಚಿಕೆಗೊಂಡು ಕರ್ತವ್ಯ ನಿರ್ವಹಿಸುತ್ತಿರುವ ಬಗ್ಗೆ ಸಂಬಂಧಿಸಿದ ಡಿ.ಹೆಚ್.ಓ ಕಛೇರಿಯಿಂದ ಪಡೆದ ದೃಢೀಕರಣ ಪತ್ರ. |

ಮನವಿ ಸಲ್ಲಿಸಿರುವ ಅಭ್ಯರ್ಥಿಗಳ ಮೆರಿಟ್ ಪಟ್ಟಿಯನ್ನು ಹಾಗೂ ಖಾಲಿ ಹುದ್ದೆಗಳ ಮಾಹಿತಿಯನ್ನು ಇಲಾಖಾ ಅಂತರ್ಜಾಲ (**https://karunadu.karnataka.gov.in/hfw**)ದಲ್ಲಿ ಪ್ರಚುರಪಡಿಸಲಾಗುವುದು.

ಸ್ಥಳ ಬದಲಾವಣೆ ಮಾಡಲು ದಿನಾಂಕ: 14.12.2022 ರಂದು 10.30 ಘಂಟೆಗೆ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ತರಬೇತಿ ಸಂಸ್ಥೆ, ಮೊದಲನೇ ಮಹಡಿ, ಸೆಮಿನಾರ್ ಹಾಲ್, ಕುಷ್ಠರೋಗ ಆಸ್ಪತ್ರೆ ಆವರಣ, ಮಾಗಡಿ ರಸ್ತೆ, ಬೆಂಗಳೂರು ಇಲ್ಲಿ ಸಮಾಲೋಚನೆಗೆ ಹಾಜರಾಗಲು ತಿಳಿಸಿದೆ.

12.12.22

**ಆಯುಕ್ತರು,**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,
ಬೆಂಗಳೂರು.

ಪ್ರತಿಯನ್ನುಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ:

1. ಸಂಬಂಧಿಸಿದ ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು/ ಜಿಲ್ಲಾ ಶಸ್ತ್ರಚಿಕಿತ್ಸಕರು/ ವೈದ್ಯಕೀಯ ಅಧೀಕ್ಷಕರುಗಳಿಗೆ ಕಳುಹಿಸುತ್ತಾ ಸದರಿ ಮಾಹಿತಿಯನ್ನು ಸೂಚನಾಫಲಕದಲ್ಲಿ ಪ್ರಚುರಪಡಿಸಲು ತಿಳಿಸಿದೆ.
2. 2022ನೇ ಸಾಲಿನಲ್ಲಿ ಒಂದು ವರ್ಷ ಕಡ್ಡಾಯ ಸರ್ಕಾರಿ ಸೇವೆಗೆ ಸ್ಥಳನಿಯುಕ್ತಿಗೊಂಡು ಕರ್ತವ್ಯ ನಿರ್ವಹಿಸುತ್ತಿರುವ ಎಂಬಿಬಿಎಸ್ ವೈದ್ಯರುಗಳಿಗೆ ಮಾಹಿತಿಗಾಗಿ.
3. ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಲು.
4. ಕಛೇರಿ ಪ್ರತಿ.